ಪ್ರಜಾವಾಣಿ

**Thursday, October 14th, 2010**

ಇದು ಬೆಂಗಳೂರು





# ಜೀನ್ಸ್ ಹೋಗಿ ಪಂಚೆ ಬಂತು ಟಾಂ ಟಾಂ ಟಾಂ...




ಚಿಂದಿ ಚಿಂದಿ ಜೀನ್ಸ್... ಲೋವೇಸ್ಟ್ ಪ್ಯಾಂಟ್ಸ್... ಟೈಟ್ ಟಿ ಶರ್ಟ್ಸ್... ಇವು ಇತ್ತೀಚಿನ ದಿನಗಳಲ್ಲಿ ಕಾಲೇಜು ವಿದ್ಯಾರ್ಥಿಗಳ ಮನಸ್ಸು ಸೂರೆ ಮಾಡಿರುವುದರಲ್ಲಿ ಸಂಶಯವಿಲ್ಲ. ಇದರಿಂದಾಗಿ ಅನೇಕ ಕಾಲೇಜುಗಳ ಕ್ಯಾಂಪಸ್‌ನ ತುಂಬ ಇವುಗಳದ್ದೇ ಕಾರುಬಾರು. ಇದನ್ನೇ ನೋಡಿ ನೋಡಿ ನಮಗೆ ಬೇಸರ ಬಂತೋ ಇಲ್ಲವೋ, ಆದರೆ ಧರಿಸಿ ಧರಿಸಿ ಅವರಿಗೂ ಬೇಸರವಾದಂತೆ ಕಾಣುತ್ತದೆ.

ಹೀಗಾಗಿ ಕನಕಪುರ ರಸ್ತೆ ಜೈನ್ ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು ತಮ್ಮ ಕಾಲೇಜಿನಲ್ಲಿ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ ಹಾಗೂ ವಾರ್ಷಿಕೋತ್ಸವವನ್ನು ಆಚರಿಸಿದ್ದು ಸಾಂಪ್ರದಾಯಿಕ ವಸ್ತ್ರ ತೊಟ್ಟು.

ರೇಷ್ಮೆ ಪಂಚೆ, ಜುಬ್ಬ, ಕುರ್ತಾ ಧರಿಸಿದ ಯುವಕರು ಕ್ಯಾಮೆರಗಳಿಗೆ ಪೋಸ್ ಕೊಡುವುದರಲ್ಲಿ ಮುಳುಗಿದ್ದರೆ, ಸೀರೆ ತೊಟ್ಟ ನಾರಿಮಣಿಗಳ ಸ್ಟೈಲ್ ಮುಂದೆ ಫ್ಲ್ಯಾಷ್‌ಗಳೇ ಸ್ವಲ್ಪ ಡಲ್ ಆದಂತೆ ಕಂಡವು. ಅಧ್ಯಾಪಕರೂ ಕೂಡ ನಾವೇನು ಕಡಿಮೆ ಎಂಬಂತೆ ಅಪ್ಪಟ ಸಾಂಪ್ರದಾಯಿಕ ಉಡುಪಿನಲ್ಲಿ ಮಿಂಚಿದರು.

